**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 831/2014

**ಸಿ ಡಬ್ಲೂ** -6

**ಪಿ ಡಬ್ಲೂ** -5

| | |
|---|---|
| **ಸಾಕ್ಷಿಯ ಹೆಸರು -** | **ಗೀರಿಶ್ ಸೋಮಯಾಜಿ** |
| **ತಂದೆಯ ಹೆಸರು -** | **ಕೆ ವಿ ಸೋಮಿಯಾಜಿ** |
| **ವಯಸ್ಸು -** | 53 **ವರ್ಷಗಳು** |
| **ಉದ್ಯೋಗ -** | **ಎಸ್ ವಿ ಸಿ ಕೊಆಪರೇಟಿವ್ ಸೊಸೈಟಿಯ ವ್ಯವಸ್ಥಾಪಕ, ಮಂಗಳೂರು** |
| **ವಾಸಸ್ಥಳ -** | **ಮಂಗಳೂರು** |

**ಸಾಕ್ಷಿಯನ್ನು ದಿನಾಂಕಃ** 27-02-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

**2011** ರಿಂದ **2014** ರವರೆಗೆ ಹೊಸಪೇಟೆಯ ಎಚ್.ಡಿ.ಎಫ್.ಸಿ ಬ್ಯಾಂಕ್ ನಲ್ಲಿ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **01-03-2013** ರಂದು ಸಂಜೆ **4.30** ಗಂಟೆಗೆ ಎಸ್ಸಾರ್ ಟ್ರೆಡಿಂಗ್ ಕಾರ್ಪೋರೇಷನ್ ಮಾಲೀಕರಾದ ಚಾಸಾ **-1** ರವರು ನಮ್ಮ ಬ್ಯಾಂಕಿಗೆ ಬಂದು ರೂ. **51,00,000/-** ಗಳ ಚೆಕ್ ಒಂದನ್ನು ಕೊಟ್ಟರು. ಸದರಿ ಚೆಕ್ ಅನ್ನು ದಿಃ **02-03-2013** ರಂದು ಕ್ಲಿಯರಿಂಗ್ ಗೆ ಹಾಕಿದ್ದೇವು. ಆ ದಿನ ಶನಿವಾರ ಇತ್ತು. ಚಾಸಾ **-1** ರವರು ಮಧ್ಯಾಹ್ನ **12.00 -1.00** ಗಂಟೆ ಸುಮಾರಿಗೆ ಬ್ಯಾಂಕಿಗೆ ಬಂದು ಚೆಕ್ ನ ಬಾಬ್ತು ಹಣ ದೊರೆಯುತ್ತದಾ ಎಂದು ಕೇಳಿದ್ದರು. ನಾನು ಕ್ಲಿಯರಿಂಗ್ ವಿಭಾಗಕ್ಕೆ ಚೆಕ್ ಪಾಸ್ ಆಗಿದೆಯೋ ಇಲ್ಲವೋ ಎಂದು ಕೇಳಿದ್ದೆ. ಕ್ಲಿಯರಿಂಗ್ ವಿಭಾಗದವರು ಐಡಿಬಿಆಯ್ ಬ್ಯಾಂಕಿನವರೊಂದಿಗೆ ಮಾತನಾಡಿ ಚೆಕ್ ಕ್ಲಿಯರ್ ಆಗಿದ್ದು ಹಣ ಪಾವತಿ ಆಗಿದೆ ಎಂದು ತಿಳಿಸಿದ್ದರು. ನಾನು ನಮ್ಮ ಕ್ಯಾಷಿಯರ್ ಗೆ ರೂ. **10,00,000/-** ಆಗಲೇ ವ್ಯವಸ್ಥೆ ಮಾಡಿ ಚಾಸಾ **-1** ರವರಿಗೆ ಕೊಡಲು ಆಗುತ್ತದೆಯೇ

ಎಂದು ವಿಚಾರಿಸಿದೆ. ಕ್ಯಾಷಿಯರ್ ರವರು ಸಾಕಷ್ಟು ಗ್ರಾಹಕರು ಇದ್ದುದ್ದರಿಂದ ಆ ದಿನ ಕಲೆ ಹಾಕುವ ಹಣವನ್ನೆಲ್ಲಾ ಕೂಡಿಸಿ ಕೊಡಲು ಸಮಯ ಬೇಕಾಗುತ್ತದೆ ಎಂದು ತಿಳಿಸಿದರು.

ಮಧ್ಯಾಹ್ನ **2.00** ಗಂಟೆಗೆ ಐ.ಡಿ.ಬಿ.ಆಯ್ ಬ್ಯಾಂಕ್ ನಿಂದ ಕರೆ ಸಹ ಬಂದಿತ್ತು ಮತ್ತು ಅಲ್ಲಿನ ಸಿಬ್ಬಂದಿಗಳು ಸಹ ಖುದ್ದಾಗಿ ಬಂದಿದ್ದರು. ಸದರಿಯವರು ಪ್ರಕರಣದಲ್ಲಿನ ಚೆಕ್ ನಕಲಿ ಇರುತ್ತದೆ ಎಂದು ನನಗೆ ಮಾಹಿತಿ ನೀಡಿದ್ದರು. ನಂತರ ನಾನು ಚಾಸಾ **-1** ರವರಿಗೆ ಹಣ ಕೊಡದಂತೆ ನಮ್ಮ ಸಿಬ್ಬಂದಿಗಳಿಗೆ ಸೂಚನೆ ನೀಡಿದೆ. ಚೆಕ್ ಸಂಖ್ಯೆ **157198** ಎಂದು ಇತ್ತು. ಖಾತೆ ಸಂಖ್ಯೆ ನನಗೆ ನೆನಪಿಲ್ಲ. ಸದರಿ ಚೆಕ್ ಎಸ್ಸಾರ್ ಟ್ರೆಡಿಂಗ್ ಕಾರ್ಪೋರೇಷನ್ ರವರ ಹೆಸರಿನಲ್ಲಿ ಇತ್ತು.

ಈಗ ನಾನು ನೋಡುತ್ತಿರುವ ಪತ್ರವನ್ನು ನಾನೇ ಪೋಲಿಸರಿಗೆ ಬರೆದಿದ್ದೆ. ಸದರಿ ಪತ್ರದೊಂದಿಗೆ ದಾಖಲೆಯನ್ನು ಸಹ ಪೋಲಿಸರಿಗೆ ಒದಗಿಸಿದ್ದೆ. ಸಾಕ್ಷಿ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **5** ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ **5** ರೊಂದಿಗೆ ಲಗತ್ತಿಸಿರುವ **2** ದಾಖಲೆಗಳನ್ನು ನೊಡಿ ಗುರುತಿಸಿದ್ದು, ಅವುಗಳನ್ನು ನಿಪಿಃ **6** ಮತ್ತು **7** ಎಂದು ಗುರುತಿಸಲಾಯಿತು. ಸಾಕ್ಷಿ ಇನ್ನೊಂದು ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **8** ಎಂದು ಗುರುತಿಸಲಾಯಿತು. ಮತ್ತು ಸದರಿ ಪತ್ರದೊಂದಿಗೆ ಲಗತ್ತಿಸಿರುವ **2** ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಪಿಃ **9** ಮತ್ತು **10** ಎಂದು ಗುರುತಿಸಲಾಯಿತು.

ಸದರಿ ಪತ್ರದೊಂದಿಗೆ ಸಿಡಿ ಒಂದನ್ನು ಕಣುಹಿಸಿಕೊಟ್ಟಿದ್ದೆ. ಸಾಕ್ಷಿ ಸಿಡಿ ನೋಡಿ ಗುರುತಿಸಿದ್ದು, ಆರೋಪಿ ಪರ ವಕೀಲರು ಸದರಿ ಸಿಡಿಯನ್ನು ಗುರುತಿಸಲು ತಕರಾರು ಇರುವುದಾಗಿ ತಿಳಿಸಿರುತ್ತಾರೆ. ತಕರಾರಿಗೆ ಒಳಪಟ್ಟು ಅದನ್ನು ನಿಪಿಃ **11** ಎಂದು ಗುರುತಿಸಲಾಯಿತು.

## ಪಾಟೀ ಸವಾಲು ಆರೋಪಿ ಪರ ಶ್ರೀ ವಾಯ್.ಎಂ.ಎಂ ವಕೀಲರಿಂದಃ

ಚೆಕ್ ನೊಂದಿಗೆ ಗ್ರಾಹಕರು ಪೇ ಇನ್ ಸ್ಲೀಪ್ ಲಗತ್ತಿಸಿ ಅದರ ಮೇಲೆ ಹೆಸರು, ಖಾತೆ ಸಂಖ್ಯೆ ಬರೆದು, ಸಹಿ ಮಾಡುತ್ತಾರೆ ಅಂದರೆ ಸರಿ. ನಮ್ಮ ಬ್ಯಾಂಕಿಗೆ ಬಂದಿದ್ದ ಚೆಕ್ ಗಳು ಮತ್ತು ಅವುಗಳ ಸಂಪೂರ್ಣ ಮಾಹಿತಿಯನ್ನು ನಮೂದಿಸಿದ ರಿಜಿಸ್ಟರ್ ಒಂದನ್ನು ನಾವು ಮೆಂಟೇನ್ ಮಾಡಿರುತ್ತೇನೆ ಅಂದರೆ ಸರಿ. ದಿಃ **02-03-2013** ರಂದು ಚೆಕ್‌ಗಳ ಬಗ್ಗೆ ರಿಜಿಸ್ಟರ್ ಮೆಂಟೇನ್ ಅಗಿರುತ್ತದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಅದು ಆನ್‌ಲೈನ್ ಡಾಟಾ ಇರುತ್ತದೆ ಎಂದು ನುಡಿಯುತ್ತಾರೆ. ಪೋಲಿಸರು ಚೆಕ್ ನೊಂದಿಗೆ ಲಗತ್ತಿಸಲಾಗಿತ್ತು ಎನ್ನಲಾದ ಪೇ ಇನ್ ಸ್ಲೀಪ್ ಅನ್ನು ಮತ್ತು ಚೆಕ್ ಗಳ ಮಾಹಿತಿ ಇರುವ ರಿಜಿಸ್ಟರ್ ಅನ್ನು ನನಗೆ ಕೇಳಿದ್ದರೋ ಇಲ್ಲವೋ ನೆನಪಿಲ್ಲ. ಚಾಸಾ **-1** ರವರು ಸದರಿ ದಾಖಲೆಗಳ ನಕಲುಗಳನ್ನು ನಮ್ಮ ಬ್ಯಾಂಕಿನಿಂದ ಪಡೆದಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪೇ ಇನ್ ಸ್ಲೀಪ್ ನ ಕೌಂಟರ್ ಫೈಲ್ ಚಾಸಾ **-1** ರವರಿಗೆ ಸಿಬ್ಬಂದಿಗಳು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಪ್ರಕರಣದಲ್ಲಿನ ಚೆಕ್ ಅನ್ನು ಪರೀಶಿಲಿಸಿದಾಗ ಅದರಲ್ಲಿನ ಮಾಹಿತಿ ತಿದ್ದು ಪಡೆಯಾದಂತೆ ಅಥವಾ ಯಾವುದೇ ಬದಲಾವಣೆಗಳು ಆದಂತೆ ಕಂಡುಬರಲಿಲ್ಲ. ಮೇಲನೋಟಕ್ಕೆ ಸದರಿ ಮೋಸ ಅಥವಾ ವಂಚನೆಯಿಂದ ಪಡೆದಿದ್ದು ಎನ್ನುವಂತೆ ಕಂಡುಬರಲಿಲ್ಲ ಅಂದರೆ ಸರಿ. ಐ.ಡಿ.ಬಿ.ಆಯ್ ಬ್ಯಾಂಕಿನವರು ಸದರಿ ಚೆಕ್ ಮೋಸದ್ದು ಎಂದು ಮತ್ತು ಚಾಸಾ **-1** ರವರಿಗೆ ಹಣ ಕೊಡಬೇಡಿ ಎಂದು ಲಿಖಿತವಾಗಿ ಯಾವುದೇ ದಾಖಲೆಯನ್ನು ನನಗೆ ಕೊಟ್ಟಿರಲಿಲ್ಲ. ಸದರಿ ಚೆಕ್ ಡಾಲ್ಫಿನ್ ಇನ್ ಫ್ರಾ ಲಿಮಿಟೆಡ್ ರವರು ಕೊಟ್ಟಿರುವ ಬಗ್ಗೆ ಅದರಲ್ಲಿ

ಮಾಹಿತಿ ಇತ್ತು. ನಾವು ಚೆಕ್ ಪಾಸ್ ಮಾಡುವಾಗ ಸದರಿ ಚೆಕ್ ನೀಡದರು ಯಾರು ಮತ್ತು ಅವರು ಯಾವ ಶಾಖೆಯಲ್ಲಿ ಖಾತೆ ಹೊಂದಿರುತಾತರೆ ಎಂದು ಪರೀಶಿಸಿಸುತ್ತೇವೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಂಬಂಧಪಟ್ಟ ಬ್ಯಾಂಕಿಗೆ ಕಳುಹಿಸುತ್ತೇವೆ ಅವರೇ ಎಲ್ಲಾ ಪರೀಶಿಲನೆ ಮಾಡುತ್ತಾರೆ ಎಂದು ನುಡಿಯುತಾರೆ. ಐ.ಡಿ.ಬಿ.ಆಯ್ ಬ್ಯಾಂಕಿನವರು ಸದರಿ ಚೆಕ್ ಮೋಸದ್ದು ಮತ್ತು ಹಣ ಪಾವತಿ ಮಾಡಬೇಡಿ ಎಂದು ನನಗೆ ತಿಳಿಸಿದ್ದರು ಎಂದು ಸುಳ್ಳು ನುಡಿಯತ್ತಿದ್ದೇನೆ ಅಂದರೆ ಸರಿಯಲ್ಲ. ಪೋಲಿಸರು ನನ್ನಿಂದ ಯಾವುದಾದರು ದಾಖಲೆ ಜಪ್ತು ಪಡಿಸಿಕೊಂಡಿತ್ತಾರೋ ಇಲ್ಲವೋ ನನಗೆ ನೆನಪಿಲ್ಲ.

ಸದರಿ ದಾಖಲೆಗಳ ಪ್ರಕಾರ ಆರೋಪಿ ನಮ್ಮ ಬ್ಯಾಂಕಿಗೆ ಬಂದ ಬಗ್ಗೆ ಮತ್ತು ಯಾವುದೇ ಚೆಕ್ ಅನ್ನು ಹಾಜರುಪಡಿಸಿದ ಬಗ್ಗೆ ನಮೂದು ಇಲ್ಲ ಅಂದರೆ ಸರಿ. ನಾನು ಮತ್ತು ಚಾಸಾ -1 ರವರು ಪೋಲಿಸರ ಮಾತು ಕೇಳಿ ನಿಪಿಃ 11 ರ ಸಿಡಿ ಸೃಷ್ಟಿಮಾಡಿರುತ್ತೇವೆ ಅಂದರೆ ಸರಿಯಲ್ಲ,

ಚಾಸಾ -1 ನಮ್ಮ ಬ್ಯಾಂಕಿನ ಗ್ರಾಹಕ ಅಂದರೆ ಸರಿ. ಸದರಿಯವರಿಗೆ ಅನುಕೂಲವಾಗಲೀ ಎಂದು ನಾನು ಅವರು ದೂರು ನೀಡಿರುವ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.